ಯಾರೋ ಅನ್ಯರ ಬದುಕಿನ ಘಟನೆ ಎಂಬಂತೆ ಅವಳು ಸಂಕ್ಷಿಪ್ತ ವಿವರ ಒಪ್ಪಿಸಿ ಮುಗಿಸಿದಳು. ಅವಳ ಗತಕ್ಕೆ ಕಿವಿಯಾದ ಅವನು. ಒಂದಷ್ಟು ಹೊತ್ತು ಇಬ್ಬರ ನಡುವೆ ಮೌನ ಸಾಮ್ರಾಜ್ಯ. ಮತ್ತೆ ಮಾತಿಗೆ ಚಾಲನೆ ಕೊಟ್ಟವಳು ನಳಿನಿಯೇ,

"ಇಂತಾ ನಿಕೃಷ್ಟ ಬದುಕಿನ ಕತೆ ನಿಮಗೆ ಹೇಳ್ಬೇಕಾದ್ದೇನಿರಲಿಲ್ಲ. ಆದ್ರೆ ನನ್ನಪ್ಪ ಬರ್ತಾರೆ, ಬಾಣಂತನಕ್ಕೆ ತೌರುಮನೆಗೆ ಕರ್ಕೊಂಡ್ಹೋಗ್ತಾರೆ ಅಂತ ನೀವು ನಂಬಿಬಿಟ್ಟಿದ್ರಿ. ನಿಜ ಏನೂಂತ ನಿಮಗೆ ಗೊತ್ತಾಗ್ಲೇಬೇಕಿತ್ತಲ್ಲ..."

"ನೀನು ಎಲ್ಲಾ ಹೇಳಿದ್ದು ಒಳ್ಳೇದೇ ಆಯ್ತು ನಳಿನಿ. ನಿನ್ನ ಬಾಣಂತನ ಇಲ್ಲಿ, ನಿನ್ನ ಹಕ್ಕಿನಮನೆಯಲ್ಲೇ ನಡೆಯುತ್ತೆ. ಬೇಕಾದ ವ್ಯವಸ್ಥೆ ಮಾಡ್ತೀನಿ ನಾನು..." ನಳಿನಿ ಕೃತಜ್ಞತೆ ತುಂಬಿದ ಕಣ್ಣುಗಳಿಂದ ಅವನ ಮುಖ ದಿಟ್ಟಿಸಿದಳು. ಸಾಲದು ಎನ್ನುವಂತೆ ಎರಡೂ ಕೈಗಳಿಂದ ಅವನ ಕಪೋಲಗಳನ್ನು ಹಿಡಿದು ಕಣ್ಣಲ್ಲಿ ಕಣ್ಣಿಟ್ಟಳು.

"ಈ ಪ್ರಾರಬ್ಧ ನನಗೆಲ್ಲಿಂದ ಗಂಟು ಬಿತ್ತು ಅನ್ಸುತ್ತಾ ನಿಮಗೆ, ಸತ್ಯ ಹೇಳಿ..."

"ಇನ್ನೊಂದು ಸಲ ಇಂತಾ ಮಾತಾಡ್ಬೇಡ. ಪ್ರಾರಬ್ಧ ಅಂದ್ರೆ ವಿಧಿ ಅಂತ ಅರ್ಥ, ಗೊತ್ತಾ ನಿನಗೆ? ನಿನ್ನ ಅಜ್ಜಿಗೆ ಅದು ಬೈಗುಳ ಆಗಿರ್ಬಹುದು. ನನ್ನ ವಿಧೀನೇ ಬದಲಾಯಿಸಿದ ದೇವತೆ ನೀನು..."

"....."

"ನನ್ನ ಕಂಡ್ರೆ ಯಾರಿಗೂ ಇಷ್ಟ ಇಲ್ಲ ಅನ್ನೋದನ್ನ ತಲೆಯಿಂದ ತೆಗೆದು ಹಾಕ್ಬಿಡು. ನಿನ್ನನ್ನ ನನ್ನ ಪ್ರಾಣಕ್ಕಿಂತಾ ಹೆಚ್ಚು ಪ್ರೀತಿಸ್ತೀನಿ ನಾನು, ದೇವರಾಣೆಗೂ..." ನಳಿನಿಯ ಕಣ್ಣುಗಳಲ್ಲಿ ನೀರೂರಿತು.

"ಅವತ್ತು ನಮ್ಮ ಮದುವೆಯಾದ ಹೊಸದರಲ್ಲಿ ಒಂದು ಮಾತು ಕೇಳಿದ್ರಿ, ನೆನಪುಂಟಾ?"

"ಏನೇ ಅದು?"

"ನನ್ನ ಮದುವೆಯಾಗೋಕೆ ಹೇಗೆ ಒಪ್ಕೊಂಡೆ ಅಂತ..."

"ಹೂಂ, ನೆನಪಾಗ್ತಿದೆ. ನಿನ್ನ ವಯಸ್ಸೇನು, ನನ್ನ ವಯಸ್ಸೇನು. ಈಡುಜೋಡು ಅಂತ ಒಂದು ಹೇಳಿಕೆ ಮಾತುಂಟು, ಅಲ್ವಾ?"

"ಆ ಪ್ರಶ್ನೆಗೆ ಈಗ ಉತ್ತರ ಹೇಳ್ಲಾ?"

"....."

"ನೀವಲ್ಲ, ಯಾರೇ ಆಗಿದ್ರೂ ನಾನು ಮದುವೆಗೆ ಒಪ್ಕೋತಿದ್ದೆ. ಹಂಗಿನ ಬದುಕಲ್ಲಿ ಬೆಂದು ಹೋಗಿದ್ದೆ ನಾನು..."

"....."

"ಸತ್ಯ ಹೇಳಿದ್ದಕ್ಕೆ ಬೇಜಾರಾಯ್ತಾ?"

"ಛೇ ಛೇ, ನಿನ್ನ ಪರಿಸ್ಥಿತಿ ಅರ್ಥ ಆಗುತ್ತೆ ನಂಗೆ..."

"ನನ್ನ ಪ್ರಶ್ನೆಗೆ ಈಗ ಉತ್ತರ ಕೊಡಿ. ರಕ್ತಸಂಬಂಧದಂತಾ ಸಂಬಂಧದಲ್ಲೂ ಒಬ್ಬರ ಮೇಲೆ ಮತ್ತೊಬ್ಬರಿಗೆ ಯಾಕೆ ದ್ವೇಷ ಹುಟ್ಟುತ್ತೆ ಅಂತ ಕೇಳಿದ್ದೆ ಅಲ್ವಾ?"

"ಆಸ್ತಿ, ಅಂತಸ್ತು ಅನ್ನೋದಿದ್ರೆ ಇರುತ್ತಪ್ಪಾ ಹೊಟ್ಟೆಕಿಚ್ಚು. ಆದರೆ ದ್ವೇಷ? ಅರ್ಥವಾಗ್ತಿಲ್ಲ ನಂಗೆ..."

"ತಾವು ಹೆತ್ತ ಮಗಳನ್ನೇ ದೂರ ಇಟ್ಟೋರ ಮನಃಸ್ಥಿತಿ ಬಗ್ಗೆ ಹೇಳಿ, ನಿಮಗೇನಾದ್ರೂ ಅರ್ಥ ಆದರೆ..."

"ನಂಗನ್ಸುತ್ತೆ, ನೀನು ನಿಮ್ಮಮ್ಮನ ಮಗಳೇ ಆಗಿರ್ಲಿಕ್ಕಿಲ್ಲ. ಮೊದಲ ಹೆಂಡತಿ ಸತ್ತು, ನೀನು ಅವರ ಮಗಳಾಗಿದ್ದು, ಹೀಗೆ ಏನೋ ಇರಬಹುದು ಸಕಾರಣ..."